ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 104-109
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಶಿರಸಂಗಿ ಶಾಸನಗಳಲ್ಲಿ ಜಾನಪದೀಯ ಅಂಶಗಳು

ರಾಮಣ್ಣ[1] ಮತ್ತು ಡಾ.ವ್ಹಿ.ಎಲ್.ಪಾಟೀಲ[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Abstract:
ಭರತ ಖಂಡದಲ್ಲಿ ಇತರ ಚಾರಿತ್ರಿಕ ಆಧಾರಗಳ ಅಭಾವ ಅಸಮರ್ಪಕತೆ, ಅವಿಶ್ವಾಸನೀಯಗಳ ಮಧ್ಯದಲ್ಲಿ ಶಾಸನಗಳ ಮಹತ್ವ ಹಾಗೂ ಪ್ರಾಮುಖ್ಯತೆ ಎಷ್ಟೆಂಬುದು ಚೆನ್ನಾಗಿ ತಿಳಿದುಬರುತ್ತದೆ. ಅವು ಒಂದು ದೇಶದ ಪ್ರಾಚೀನ ಇತಿಹಾಸವನ್ನು ರಚಿಸುವಲ್ಲಿ ಎಕೈಕ ಖಚಿತ ಆಧಾರವಾಗಿವೆ. ಶಾಸನಗಳು ರಾಜ ಮತ್ತು ಅಧಿಕಾರಿ ವರ್ಗದವರಿಗೆ ಸಂಬಂಧಿಸಿದವುಗಳು. ಅವು ರಾಜಶಾಹಿ ಮತ್ತು ಅಧಿಕಾರಶಾಹಿಯನ್ನು ಜನತೆಯ ಮಧ್ಯದಲ್ಲಿ ತಂದು ನಿಲ್ಲಿಸುವ ಸಾಧನಗಳೆಂದು ಭಾವಿಸಲಾಗಿದೆ. ಆದರೆ ಅದರಲ್ಲಿ ಜನಸಾಮಾನ್ಯರಿಗೂ ಸಂಬಂಧಿಸಿದ ಅನೇಕ ಅಂಶಗಳುಂಟು ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವುಗಳ ಕುರಿತಾದ ಅಧ್ಯಯನವೇ ಇವರಿಗೆ ನಡೆದಿರುವುದು ತುಂಬಾ ವಿರಳ. ಈ ನೆಲೆಯಲ್ಲಿ ಶಿರಸಂಗಿಯ ಶಾಸನಗಳಲ್ಲಿಯ ಜಾನಪದೀಯ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ

Keywords: *ಕನ್ನಡ ಸಾಹಿತ್ಯ, ಜಾನಪದ ಸಾಹಿತ್ಯ, ಇತಿಹಾಸ, ಶಾಸನಗಳ ಅಧ್ಯಯನ*

ಪೀಠಿಕೆ

ಸಾಮಾನ್ಯವಾಗಿ ಪ್ರತಿಯೊಂದು ಶಾಸನವೂ ದೈವ ನಂಬಿಕೆಯ ಸ್ಮರಣೆಯೊಂದಿಗೆ ಒಂದೇ ಶೈಲಿಯಲ್ಲಿ ಪ್ರಾರಂಭವಾಗುತ್ತವೆ. ಸಾಮಾನ್ಯವಾಗಿ ಯಾವೊಂದು ಶಾಸನಕ್ಕೂ ತನ್ನದೇ ಆದ ವಿಶೇಷ ಆರಂಭವೇನಿಲ್ಲ. ಇಡೀ ಭಾರತ ಮನುಕುಲದ ದೃಷ್ಟಿ, ಆಧ್ಯಾತ್ಮಿಕ ಮೂಲದಿಂದಲೇ ಅರಳಿದೆ. ಅದಕ್ಕೆ ಮೂಲ ಜನಪದ ದೈವ ನಂಬಿಕೆಯ ದೃಷ್ಟಿ. ಜನಪದರು ಯಾವುದೇ ಕಾರ್ಯ ಪ್ರಾರಂಭಿಸುವ ಪೂರ್ವದಲ್ಲಿ ದೇವರನ್ನು ಸ್ತುತಿಸಿಯೇ ಕಾರ್ಯಾರಂಭ ಮಾಡುತ್ತಾರೆ. ಅದರಂತೆಯೇ ಶಾಸನಗಳಲ್ಲೂ ಸಹ ಅದೇ ಮಾದರಿಯಲ್ಲಿಯೇ ತಮ್ಮ ಇಷ್ಟಾನು ದೈವವನ್ನು ಸ್ಮರಿಸಿಯೇ ಕಾರ್ಯಾರಂಭವಾಗುವ ಪರಂಪರೆಯನ್ನು ಕಾಣುತ್ತೇವೆ ಅದು ಮೂಲತಃ ಜನಪದದ್ದಾಗಿದೆ.

ನಮಸ್ತುಂಗ ಶಿರಚ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿ–ತಾರ್ಣ್ಣವಂ ದಕ್ಷಿಣೋಂನತ ದಂಷ್ಟ್ರಾಗ್ರ ವಿಶ್ರಾಂತಭುವನಂ ವಪುಃ ॥[1]

ಈ ಶ್ಲೋಕಗಳು ಕ್ರಮವಾಗಿ ಶಿವ–ವಿಷ್ಣು ಸ್ತುತಿಗಳಾಗಿವೆ. ಪ್ರಸಿದ್ಧವಾದ, ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ (ಯಾವನ ಶಿರಸ್ಸಿನಲ್ಲಿ ಚಂದ್ರನು ಮನೋಹರವಾದ ಚಾಮರದಂತಿದ್ದಾನೋ ಯಾವನು ಮೂರು ಲೋಕಗಳಿಗೂ ಆಧಾರ ಸ್ತಂಭದಂತಿದ್ದಾನೋ ಆ ಶಂಭೂವಿಗೆ ನಮಸ್ಕಾರ)

Please cite this article as: ರಾಮಣ್ಣ ಮತ್ತು ವ್ಹಿ.ಎಲ್.ಪಾಟೀಲ. (2026). ಶಿರಸಂಗಿ ಶಾಸನಗಳಲ್ಲಿ ಜಾನಪದೀಯ ಅಂಶಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 104–109

ಎಂಬ ಶಿವಸ್ತುತಿನೊಡನೆ ಶಾಸನ ಪ್ರಾರಂಭವಾಗಿದೆ. ಎಂಬುದನ್ನು ಗಮನಿಸಬೇಕು.

ಈ ರೀತಿ ಸ್ತುತಿ ಪದ್ಯಗಳು ಹೆಚ್ಚಾಗಿ ಸಂಸ್ಕೃತದಲ್ಲಿ ರಚಿತವಾಗಿವೆ. ಮುಂದೆ ಇಡೀ ಶಾಸನ ಕನ್ನಡದಲ್ಲಿದ್ದರೂ ಇಂಥ ಸ್ತುತಿ ಪದ್ಯ ಮತ್ತು ಶಾಪಾಶಯಗಳು ಸಾಮಾನ್ಯವಾಗಿ ಸಂಸ್ಕೃತದಲ್ಲಿ ರಚಿತವಾಗಿವೆ. ಇಲ್ಲಿ ಶೈವ ಪರಂಪರೆಯವರು ಶಿವನನ್ನು, ವೈಷ್ಣವ ಪರಂಪರೆಯವರು ವಿಷ್ಣುವನ್ನು ನೆನೆಯುವ ಪರಿಪಾಠ ಬೆಳೆದು ಬಂದಿರುವುದನ್ನು ಗಮನಿಸಬೇಕು. ಈ ದೈವಪರ ಪ್ರಾರ್ಥನೆ ಇನ್ನು ಮುಂದುವರೆದು ದೈವ ಪರವಾಗಿ ನೋಡಿದಾಗ ಓಂ ನಮಃ ಶಿವಾಯ, ಹೀಗೆ ಮುಂತಾದ ಶಾಸನದ ಆರಂಭದಲ್ಲಿ ಬಳಸಿರುವುದುಂಟು. ಇದೊಂದು ಪರಂಪರೆಯಾಗಿ ಬೆಳೆದು ಬಂದಿದೆ. ಈ ರೀತಿ ಆರಂಭದಲ್ಲಿ ಶಿರಸಂಗಿ ಶಾಸನಗಳಲ್ಲಿ ಶಿವ–ವಿಷ್ಣು ದೈವ ಸ್ತುತಿಸುವ ಮನಸ್ಥಿತಿಯೊಂದು ಮೂಡಿಬಂದಿದೆ.

ಶಿರಸಂಗಿ ಗ್ರಾಮದ ಪ್ರಕೃತಿ ಸೌಂದರ್ಯ

ಶಿರಸಂಗಿಯ ಕಲ್ಮೇಶ್ವರ ದೇವಾಲಯ ಎದುರಿಗೆ ಇರುವ ಶಾಸನವು ಕ್ರಿ.ಶ. 1148 ರಲ್ಲಿ ಕೆತ್ತಿಸಲ್ಪಟ್ಟಿದೆ ಈ ಶಾಸನವು ಚಾಲುಕ್ಯರ ಎರಡನೆ ಜಗದೇಕಮಲ್ಲನು ಆಳ್ವಿಕೆ ಮಾಡುತ್ತಿದ್ದ ಸಮಯದಲ್ಲಿ ಈತನ ಮಹಾ ಪ್ರಧಾನ ದಂಡನಾಯಕ ಕೇಶಿಮಯ್ಯನು ಶಿರಸಂಗಿ ಪ್ರದೇಶದ ಉಸ್ತುವಾರಿಯನ್ನು ಹೊತ್ತಿದ್ದನು. ಅಂದಿನ ಶಿರಸಂಗಿ ಊರಿನ ಪ್ರಕೃತಿ ಸೌಂದರ್ಯವನ್ನು ಶಾಸನವು ತಿಳಿಸುತ್ತದೆ.

> ***ಸುತ್ತಿದ ಬೆಟ್ಟದಿಂದೆಸವ ನನ್ದನದಿ ಫಲವುಂ ತಟಾಕದಿಂ***
> ***ದುತ್ತಮವಪ್ಪ ದೇವಗ್ರಹ ಸಂಕುಳದಿಂ ವರದಿವ್ಯತೀರ್ಥದಿಂ***
> ***ವೃತ್ತಪಯೋಧರಾಂಗನೆಯರಿಂ ಸುಕವೀಶ್ವರ ತಂಡದಿಂದುಲೋ***
> ***ಕೋತ್ತರ ವಾಯ್ತು ಬೆಳ್ವೊಲದೊಳ್ಳಿ ರಿಶಿಶೃಂಗಪುರಂ ಮನೋಹರಂ*** ॥[2]

ಶಿರಸಂಗಿಯನ್ನು ರಿಶಿಶೃಂಗಪುರವೆಂದು ಹೇಳುತ್ತಾ ಸುತ್ತುವರಿದ ಸಹ್ಯಾದ್ರಿ ಪರ್ವತಗಳಿಂದಲೂ, ಸುಂದರವಾದ ತೋಟಗಳಿಂದಲೂ, ಅನೇಕ ಕೆರೆಗಳಿಂದಲೂ, ಶೋಭಿಸುವಂತ ಶ್ರೇಷ್ಠವಾದ ದೇವಾಲಯಗಳ ಸಮೂಹದಿಂದಲೂ, ದಿವ್ಯ ತೀರ್ಥಕ್ಷೇತ್ರಗಳಿಂದಲೂ, ಫಲಪುಷ್ಪಗಳಿಂದಲೂ, ಜನಪ್ರಿಯ ಮತ್ತು ಶ್ರೇಷ್ಠವಾಗಿತ್ತು ಎಂಬ ನಿಸರ್ಗ ಸೌಂದರ್ಯ, ವರ್ಣನೆ ಈ ಶಾಸನದಲ್ಲಿ ಕಾಣುತ್ತೇವೆ.

ಗ್ರಾಮೀಣ ವೃತ್ತಿಗಳು

"ಕ್ರಿ.ಶ. 1148ರ ಈ ಶಾಸನವನ್ನು ಭುವನ ಚಂದ್ರ ಸಿದ್ಧಾಂತ ದೇವನ ಶಿಷ್ಯನಾದ ಕಲಿದೇವಪಂಡಿತ ರಚಿಸಿದ್ದಾನೆ. ಇದನ್ನು ಶಿರಸಂಗಿಯಲ್ಲಿ ಶಾಸನವನ್ನು ಸಮತೋಜನ ಕೆತ್ತಿದ್ದಾನೆ. ಪಂಚಾಳ ಕುಲದ ಶಿಲ್ಪಿ ಸುಮತೋಜನು ಇದನ್ನು ಒಂದು ಶುಭ ಮುಹೂರ್ತದಲ್ಲಿ ಇಮ್ಮಡಿ ಜಗದೇಕಮಲ್ಲನು ಸಿಂಹಾಸನವೇರಿದ ಏಳನೇ ವಾರ್ಷಿಕೋತ್ಸವದ ವಿಭವ ಸಂವತ್ಸರ, ಪುಷ್ಯ ಮಾಸದ ಶುಕ್ಲ ಪಕ್ಷ, ದಶಮಿ, ಸೋಮವಾರದಂದು ಬರೆದಿದ್ದಾನೆಂದು ಶಾಸನ ತಿಳಿಸುತ್ತದೆ."[3] ಇಲ್ಲಿ ಪ್ರಮುಖವಾಗಿ ಗ್ರಾಮೀಣ ಕರಕುಶಲ ಸಂಸ್ಕೃತಿಯ ಪಾಂಚಾಳ ವೃತ್ತಿಯನ್ನು ಮತ್ತು ಪಂಚಾಳರು ತಯಾರಿಸುವ ಮೂರ್ತಿ ಶಿಲ್ಪ, ಮರದ ವಸ್ತು, ಆಭರಣ, ಲೋಹದ ವಸ್ತುಗಳು, ಕೃಷಿ ಸಲಕರಣೆಗಳು ಹೀಗೆ ಜನಪದ ಜೀವನಕ್ಕೆ ಬೇಕಿರುವ ವಸ್ತುಗಳನ್ನು ಪಾಂಚಾಳರು ಈ ಪ್ರದೇಶದಲ್ಲಿ ತಯಾರಿಸುತ್ತಿದ್ದನ್ನು ಈ ಶಾಸನ ತಿಳಿಸುತ್ತದೆ. ಹೀಗೆ ಜನಪದ ಜೀವನ ವೃತ್ತಾಂತವನ್ನು ಈ ಶಾಸನದಲ್ಲಿ ಕಾಣುತ್ತೇವೆ.

ಗ್ರಾಮದ ಆರು ಜನ ಗಾವುಂಡರ ಬಗ್ಗೆ ಈ ಶಾಸನ ತಿಳಿಸುತ್ತದೆ. "ಅವರಲ್ಲಿ ತೋಲಹ ಕುಲದ ಕಾವಗಾವುಂಡನು ಇಲ್ಲಿಯ ಗ್ರಾಮೇಶ್ವರ ದೇವಾಲಯಕ್ಕೆ (ಇಂದು ಕಲ್ಮೇಶ್ವರ ದೇವಾಲಯವೆನ್ನುವರು) ಪೂಜೆ, ಜೀರ್ಣೋದ್ಧಾರಕ್ಕೆಂದು 2 ಮತ್ತರ ಭೂಮಿಯನ್ನು ಅದರ ಸ್ಥಾನಾಚಾರ್ಯ ರುದ್ರಶಕ್ತಿ ದೇವನಿಗೆ ದಾನ ಮಾಡಿದ್ದಾನೆ. ತೋಲಹ ಕುಲದ ಚಿಯಲಗೌಂಡ, ತಿಪ್ಪಗೌಂಡ, ಅರಂದರ ಕುಲದ ಬೋನಗೌಂಡ,

ಪದ್ಮಗೌಂಡ ಮತ್ತು ಬೊಮ್ಮಗೌಂಡರು ದೇವಾಲಯಕ್ಕೆ ಅನೇಕ ಸಲ ಭೂದಾನ ಮಾಡಿದ್ದನ್ನು ಹೇಳುತ್ತದೆ. ಈ ಊರ ಗೌಡರು ನೀಡಿದ ಭೂದಾನವನ್ನು ರುದ್ರಶಕ್ತಿ ದೇವರು ಸ್ವೀಕರಿಸಿದ್ದಾಗಿ ಶಾಸನ ಹೇಳುತ್ತದೆ. 'ಈ ಆರು ಗಾವುಂಡರ ಮನೆತನಗಳು ಅಂದು ಭಿನ್ನ–ಭಿನ್ನವಾಗಿದ್ದರೂ ಅವರಲ್ಲಿದ್ದ ಐಕ್ಯತೆ, ಪರದಾರ ಸೋದರತ್ವ, ಪ್ರೀತಿ, ವಾತ್ಸಲ್ಯ, ಗೌರವ, ನಾಡಿನಲ್ಲಿ ಮೊಳುಗುತ್ತಿದ್ದವೆಂದು ಶಾಸನ ತಿಳಿಸುತ್ತದೆ'.[4] ಶಿರಸಂಗಿಯಲ್ಲಿ ಜನರ ಜೀವನ ಸುಖಮಯವಾಗಿರಲು ಕೆರೆ ನಿರ್ಮಿಸಲು ಸೌಗುಳದ ರಾಜಿಗೌಂಡನ ಹೆಂಡತಿ ಸೋರಿ ಗವುಂಡಿಯು ಭೂಮಿಯನ್ನು ದತ್ತಿಯಾಗಿ ಕೊಟ್ಟಿರುವ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ, ಇಲ್ಲಿ ಪ್ರಮುಖವಾಗಿ ಗಮನಿಸುವ ವಿಷಯವೇನೆಂದರೆ, ಸೋರಿ ಗವುಂಡಿಯು ಪುರುಷನಷ್ಟೇ ಸಮಾನಳಾಗಿ ದಾನ ಮಾಡುವ ಮತ್ತು ಕೆರೆಯನ್ನು ನಿರ್ಮಿಸಿರುವುದು ಶಾಸನದಿಂದ ತಿಳಿದು ಬರುತ್ತದೆ. ಇದು ಗ್ರಾಮೀಣರ ಮುಖಂಡನಾದ ಗಾವುಂಡ ಮತ್ತು ದಾವುಂಡಿಯರ ಕಾರ್ಯವನ್ನು ವಿವರಿಸುವ ಮತ್ತು ಜನಪದರ ಬದುಕಿನ ಹಾಗೂ ಕೃಷಿ ಕಾಯಕಕ್ಕೆ ಬೇಕಿರುವಂತಹ ನೀರಿನ ಬೇಡಿಕೆಯನ್ನು ಪೂರೈಸಿದ ಚಿತ್ರಣವಿದೆ.

ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿರುವ ಕ್ರಿ.ಶ.1186 ರ ಶಾಸನದಲ್ಲಿ ಶಿರಸಂಗಿ ಪಟ್ಟಣದ ರಸ್ತೆಗಳು, ರಾಜಮಾರ್ಗಗಳು, ರಾಜ ದರ್ಬಾರ, ಕಂದಾಯ ಕಛೇರಿಗಳು, ಪೊಲೀಸ್ ಪಡೆ, ಸೇನಾ ಪಡೆ, ಜೊತೆಗೆ ಜನಪದರು ತಮ್ಮ ಆಯಗಾರಿಕೆ, ಕರಕುಶಲ ವಸ್ತುಗಳನ್ನು, ಅಂಗಡಿಗಳು, ಕಿರಾಣಿ, ಜವಳಿ, ಬಾರಡಿ–ಸಾಲು, ಸಾಲಾಗಿ ಕಂಗೊಳಿಸುತ್ತಿದ್ದವು. ಹಾಗೂ ಗ್ರಾಮೀಣ ಜನರ ಆಯಗಾರಿಕಾ ಸಂಸ್ಕೃತಿಯ ವೃತ್ತಿಗಳಾದ ಸುವರ್ಣಗಾರ, ಕುಲುಮೆ, ಬಡಿಗ, ಕಮ್ಮಾರ, ಶಿಲ್ಪಿ, ಮುಂತಾದ ಜನಪದ ವೃತ್ತಿಗಳು ಶಿರಸಂಗಿಯನ್ನು ರಮಣೀಯ ಸ್ಥಳವನ್ನಾಗಿ ಏರ್ಪಡಿಸಿದವು. ಜೊತೆಗೆ ಶಿರಸಂಗಿಯೂ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿ ಲೋಹದ ವಸ್ತುಗಳನ್ನು ತಯಾರಿಸುತ್ತಿದ್ದರು. ಐಹೊಳೆ ಐನೂರು ಸ್ವಾಮಿಗಳು ಜಯಮೋಯ್ಯಸೆಟ್ಟಿ ಸೋವಿಶೇಟ್ಟಿ ಮುಂತಾದ 1200 ಪಟ್ಟಣದ ಶೆಟ್ಟಿಗುತ್ತರು, ಸ್ಥಳಿಕರಾದ ಸೆಟ್ಟಿಗುತ್ತರು ಸಭೆ ಸೇರಿ ದೇವಾಲಯಕ್ಕೆ ದತ್ತಿ ನೀಡುತ್ತಾರೆ. ಇಲ್ಲಿ ಬರುವ ಪ್ರಮುಖರಲ್ಲಿ ಬಿರುದರು, ಬೀರವಣಿಗರು, ಗವರಿಗಳು, ಗಾತ್ರಿಗರು, ನಖರುಗಳು ವ್ಯಾಪಾರದಲ್ಲಿದ್ದ ವಿವಿಧ ಶ್ರೇಣಿಗಳನ್ನು ಸೂಚಿಸುತ್ತವೆ. ಶಿರಸಂಗಿಯು ಐಹೊಳೆಗೆ ಸಮಾನವಾದಂತಹ ವ್ಯಾಪಾರ ಕೇಂದ್ರವಾಗಿತ್ತೆಂದು ಶಾಸನ ತಿಳಿಸುತ್ತದೆ.

ಶಿರಸಂಗಿಯ ಶಾಸನಗಳಲ್ಲಿ ಜಾನಪದೀಯ ಅಂಶಗಳಲ್ಲಿ ಮತ್ತೊಂದು ವಿಶಿಷ್ಟ ಮತ್ತು ಕುತೂಹಲ ಅಂಶಗಳೆಂದರೆ ದೇವಸ್ಥಾನಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ, ದಾನದತ್ತಿ ಕೊಡುವ ಪದ್ಧತಿಯು ಪ್ರಾಚೀನ ಕಾಲದಿಂದ ಬಂದಿರುವುದನ್ನು ಕಾಣುತ್ತೇವೆ, ಅದೇ ತೆರನಾಗಿ ಶಿರಸಂಗಿಯಲ್ಲಿ ಹಬ್ಬೆನಾಯಕನ ಧರ್ಮ ಬುದ್ಧಿಯನ್ನು ಕಂಡು, ಧರ್ಮ ಬುದ್ಧಿ ಹುಟ್ಟಿದ ಅನೇಕ ಜನ ದೇವಾಲಯಕ್ಕೆ ದತ್ತಿಯನ್ನು ಕೊಡುತ್ತಾರೆ. ಈ ಸಂದರ್ಭದಲ್ಲಿ ಕೊಟ್ಟಿರುವ ದಾನದ ವಿವರಗಳನ್ನು ಶಾಸನ ಸ್ಪಷ್ಟವಾಗಿ ತಿಳಿಸುತ್ತದೆ. ಜೊತೆಗೆ ದಾನ ಕೊಟ್ಟ ಭೂಮಿಯ ಸೀಮೆಯನ್ನು ಗುರುತಿಸಲು ಶಿರಸಂಗಿಯಲ್ಲಿ ಲಿಂಗ ಕಲ್ಲುಗಳನ್ನು ನೆಡುತ್ತಿದ್ದರು ಎಂಬ ವಿಷಯವು ಈ ಶಾಸನದಲ್ಲಿದೆ. ಶಿರಸಂಗಿ ವೀರಕ್ಷೇತ್ರವಾಗಿತ್ತು. ಸುಸ್ತಾಳವಾಗಿತ್ತು, ದೇವದುರ್ಗ ಎನಿಸಿಕೊಂಡಿತ್ತು ಎಂದು ಕವಿ ವಿವರಿಸಿದ್ದಾನೆ, ಶಿರಸಂಗಿಯಲ್ಲಿ ಮಳೆ, ಬೆಳೆಗಳಿಂದ ಫಲವತ್ತಾಗಿ, ಸಂಪತ್ತಿನಿಂದ ಸಮೃದ್ಧವಾಗಿ ಧನ್ಯರಾದ ಜನಸಾಮಾನ್ಯರಿಂದ ಅವರ ಕೃಷಿ ಕಾಯಕದಲ್ಲಿ ಸಂತೋಷದಿಂದ ಜೀವನವನ್ನು ನಡೆಸುತ್ತಿದ್ದರಿಂದ ಶಿರಸಂಗಿಯು ಶೋಭಿಸುತ್ತಿತ್ತು ಎಂದು ಶಾಸನ ಕವಿ ಸಜ್ಜನ ತಿಲಕ ವಿವರಿಸಿದ್ದಾನೆ.

ಕಥೆ ಮತ್ತು ಸ್ಥಳಪುರಾಣ

'ಈ ಶಿರಸಂಗಿಯ ಪ್ರಾಚೀನ ಕಾಲದಲ್ಲಿ ರಿಶ್ಯಶೃಂಗಿಯ ಬಳಿಯ ಕಿಷ್ಕಂಧಬೆಟ್ಟವು ಸುಗ್ರೀವ

ಮುಂತಾದವರಿಗೂ ಮತಂಗ, ಕಪಿಲ, ಅಗಸ್ತ್ಯ ಮುಂತಾದವರಿಗೂ ಆಶ್ರಯಸ್ಥಾನವಾಗಿತ್ತು ಅಲ್ಲಿನ ತಪ್ಪಲು ಪ್ರದೇಶದಲ್ಲಿ ಸಕಲ ವೇದ ವೇದಾಂಗಗಳನ್ನು ಅರಿತಿದ್ದ ವಿಭಾಂಡಕ ಮುನಿ ವಾಸ ಮಾಡುತ್ತಿದ್ದ’.[5] ಇವನು ಮಹಿಮೆಯಿಂದ ಖಗಮೃಗಗಳು ತಮ್ಮ ಸಹಜ ವೈರತ್ವವನ್ನು ತೊರೆದು ಬದುಕುತ್ತಿದ್ದವು. ಅವನು ಮೋಕ್ಷ ಫಲವನ್ನೆಲ್ಲದೆ ಉಳಿದ ಆಸೆಗಳನ್ನು ಇಟ್ಟುಕೊಂಡಿರಲಿಲ್ಲ.

ವಿಭಾಂಡಕ ಮುನಿಯು ಒಂದು ದಿನ ಸ್ನಾನ ಮಾಡುವ ಉದ್ದೇಶದಿಂದ, ಸರೋವರದ ಹತ್ತಿರ ಬಂದು, ನೀರಿನಲ್ಲಿದ್ದ ಅಪ್ಸರೆಯೊಬ್ಬಳ ರೂಪರಾಶಿಯನ್ನು ನೋಡಿದನು. ಕೂಡಲೇ ಅವನ ಮನಸ್ಸು ವಿಕಾರವಾಯಿತು. ಸ್ಖಲನೆಯಾದ ಮುನಿವೀರ್ಯವನ್ನು ಆ ಅಪ್ಸರೆಯು ಆಗ್ರಹಿಸಿದಾಗ. ಅವಳು ಗರ್ಭವತಿಯಾಗಿ ಕುವರನೊಬ್ಬನು ಹುಟ್ಟಿದ. ಹುಟ್ಟಿದ ಮಗುವಿಗೆ ತಲೆಯಲ್ಲಿ ಕೊಂಬುಗಳಿಂದವು. ಆ ಅಪ್ಸರೆಯು ಮಗುವನ್ನು ಅಲ್ಲೇ ಬಿಟ್ಟು ದೇವಲೋಕಕ್ಕೆ ಹಾರಿಹೋದಳು.

> *ನಾಂತಂ ।। ಮರೆವಿಡಿಯಾಘ್ರಾಯಿಸೆ*
> *ಮುನಿವರವೀರ್ಯ್ಯವಮೋಘವೀರ್ಯ್ಯವಪ್ಪುದ*
> *ಱಿಂದಾ ಮರೆವೆಣ್ಣಗರ್ಭ್ಭದಿಂದವತರಿಸಿದನೊರ್ವ್ವಂ*
> *ಕುಮಾರಕಂ ಶೃ[ಂ*]ಗಯು*
> *ತಂ॥ ಆಗಳೂ । ಪುರುಶಾಕಾರದ ರೂಪಂ*
> *ಮರೆಗೋ–*
>
> *ಡಂ ಕಾಣಲೊಡನೆ ಯಾ ಮರೆವೆಣ್ಣಚ್ಚರಸೆಯ*
> *ರೂಪಂ ತಳೆದಂಬರಕ್ಕೆ ಪಾರಿದುದೆ(ದು)*
> *ನಿಜ ನಿವಾಸಮನೆಯ್ದಲೂ ॥ ಅಂದೆಂತೆಂದೊಡೆ*
> *ಮಂಜುಘೋಷೆಯೆಂಬಚ್ಚರಸೆಯೋರ್ಮ್ಮೆ*
> *ರಾಗದಿಂ ರಾಗಾಂಧೆಯಾಗಿ ಶೃಂಗಿಯೆಂಬ ಬ್ರಹ್ಮ ॥* [6]

ಸಜ್ಜನತಿಲಕನು ಸೊಗಸಾಗಿ ಈ ಕಥೆಯನ್ನು ಹೇಳಿ, ತನ್ನ ನಿಜ ನಿವಾಸಕ್ಕೆ ಹಾರಿಹೋದ ಮಂಜುಘೋಷಿಯ ಪ್ರಸಂಗವನ್ನು ಗ್ರಾಮೀಣ ಜನಪದದಲ್ಲಿ ಮುಂದುವರೆಸಿದ್ದಾನೆ ಮಂಜುಘೋಷೆಯಂಬ ಅಪ್ಸರೆ, ತನ್ನ ರೂಪಸೌಂದರ್ಯಗಳ ಅಭಿಮಾನದಿಂದ ಶೃಂಗಿ ಎಂಬ ಬ್ರಹ್ಮರ್ಷಿ ತಪ್ಪಸು ಮಾಡುತಿದ್ದನ್ನು ತಿಳಿಯದೆ, ತನ್ನ ಸಖಿಯರನ್ನು ಸೇರುವ ಆತುರದಿಂದ, ಸೋಂಕುವಂತೆ ಹೋದಾಗ ಅವನು ಮುನಿದು, ನೀನು ಅದೃಶ್ಯಳಾಗು ಎಂದು ಶಾಪವನ್ನು ಕೊಟ್ಟ. ಅವನ ಕೋಪಕ್ಕೆ ಹೆದರಿ, ಶಾಪವನ್ನು ಸ್ವೀಕರಿಸಿ, ವಿನಯದಿಂದ ವಿಲಾಪವನ್ನು ಬೇಡಿದಳು. ವಿಭಾಂಡಕ ಮುನಿಯ ವೀರ್ಯದ ಕಾರಣದಿಂದ ವಿಶಾಪವೆಂದು ತಿಳಿದಾಗ ಅದನ್ನು ಹಾರೈಸುತ್ತಾ ಇದ್ದಳು ಶಾಪ ವಿಮೋಚನೆಯಾದಾಗ, ತನ್ನ ಮಗುವನ್ನು ಬಿಟ್ಟು ಅದೃಶ್ಯಳಾದಳು.

> *ರ್ಷಿಯನುಷ್ಟಾನಂಗೆಯ್ವುತಿರ್ದ್ದುದನಱಿಯದೆ*
> *ತಂನ ಸವಗಾಣಿಕೆಯರ ಸಾರಂಙ್ಗೆವೋಪ*
> *ತವಕದಿನಾ ಶೃಂಗಿಯಿಂ ಸೋಕುವಂತೆ ಸೋಂಕಿ*
> *ಪೋಪಾಗಳವಳ್ಗೆ ಮುನಿ ಮುನಿದು ನೀಂ*
> *ಡೆಸೇಬಿದ್ದಂಮರೆಯಂತೆ ಪಾಯಿ ತಂದೆಯಪ್ಪುದ–*
>
> *ಱಿಂ ಮರೆಯಾಗೆಂದು ಶಾಪಮಂ ಕುಡೆ*
> *ಕೋಪಕ್ಕಂಜಿ ಶಾಪಮಂ ಕೈಯ್ಕೊಂಡು ಮಗುಳೆ*
> *ಬಂದವರ ಪದಪದ್ಮಕ್ಕೆಱಗಿ ಯಾನಜ್ಞಾನದಿಂ*
> *ನಿಂಮನವಜ್ಞೆಗೆಯ್ದೆನೆನ್ದಿಗೆ ವಿಶಾಪ*
> *ನಿಮಿತ್ತಮಂ ಬೆಸಸಿವೆನೆ ವಿಭಾಂಡಕಮುನಿಯ*
> *ವೀರ್ಯ–*[7]

ವಿಭಾಂಡಕ ಮುನಿಯು, ತ್ರಿಕಾಲದರ್ಶಿಯಾದುದರಿಂದ ತನ್ನ ಮಗುವಿನ ಮಹಿಮೆಯನ್ನು ತಿಳಿದು ಸಲಹಿದನು. ಇಂದ್ರ, ಅಶ್ವಿನಿ ದೇವತೆಗಳಿಂದ ವರವನ್ನು ಕೊಡಿಸಿ, ಶೃಂಗ ಸಮೇತ ಹುಟ್ಟಿದ ಮಗುವಾದ ಕಾರಣ ರಿಶ್ಯಶೃಂಗನೆಂದು ನಾಮಕರಣ ಮಾಡಿದನು. ಮುಂದೆ ಪ್ರಖ್ಯಾತನಾದ ರಿಶ್ಯಶೃಂಗ ಮುನಿಯ ಕೀರ್ತಿಯನ್ನು ಕೇಳಿ, ಸೂರ್ಯವಂಶದ ದಶರಥನು ಋಷಿಯನ್ನು ಕರೆಸಿ ಪುತ್ರಕಾಮೇಷ್ಠಿಯನ್ನು ಮಾಡಿಸಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನಾರೆಂಬ ನಾಲ್ವರು ಪುತ್ರರನ್ನು ಪಡೆದನು.

ದ ದೆಸೆಯಿಂ ನಿನಗೆ ರಿಶ್ಯಶೃಂಗಾನ್ವಿತಮೊರ್ವ್ವ ಮಗಂ ಪುಟ್ಟಲೊಡನೆ ನಿನಗಾನಿತ್ತ ಶಾಪಂ

ವಿಶಾಪವಾಗಿ ಪುನ[ರ]ಪ್ಸರೆಸ್ಸಂಪತ್ತಿಯಂ ಪಡೆವೆ ಎನೆ ಮುನಿಪ್ರಕ್ಷೋಭದಿಂ

ಖೇದಮಂ ಪುತ್ರಲೋಭದಿನತಿ ಪ್ರಮೋದಮಂ ತಳೆದು ತತ್ಸಮ–

ಯವಂ ಪಾರ್ದ್ದಿರ್ಪ್ಪದೆ(ರ್ಪ್ಪುದು) ವಂತವೆಲ್ಲಂ ತಂನ ಬಯಕೆಯೊಳೊಡಗೂಡಿ ಕೂಡೆ

ಕೃತಾರ್ತ್ಥೆಯಾದಳಿತ್ತಲೂ ॥ ಜನನಿ ಬಿಸುಟ್ಟು ಪೋಗೆ ಖರರೋಚಿಯ ತೀಕ್ಷ್ಣಮರೀಚಿ

ಕಾಯ್ದು ಕಬ್ಬುನವೆನಲಗ್ಗಳಂ ಬಿಸುಪನಾಗಿಸಿದಾ ನೆಲದೊ–[8]

ರಾಮ ಲಕ್ಷ್ಮಣರು ರಾವಣನ ಸಂಹಾರದ ನಂತರ ಅಯೋಧ್ಯೆಗೆ ಮರಳುವಾಗ ಈ ಮುನೀಂದ್ರನ ಆಶ್ರಮಕ್ಕೆ ಬಂದಿದ್ದರು. ಅಲ್ಲಿ ರಾಮ, ಲಕ್ಷ್ಮಣ, ಹನುಮಂತ ದೇವರುಗಳನ್ನು ಶಿರಸಂಗಿಯಲ್ಲಿ ಲಿಂಗದ ರೂಪದಲ್ಲಿ ರಾಮೇಶ್ವರ, ಲಕ್ಷ್ಮಣೇಶ್ವರ, ಹನುಮಂತೇಶ್ವರಗಳನ್ನು ಪ್ರತಿಷ್ಠಾಪಿಸಿದರು. ಹೀಗೆ ರಿಶ್ಯಶೃಂಗಿ, ಪುಣ್ಯಕರಣವೂ ಅನುಪಮವಾದ ಶೋಭಾಕರವೂ ಆಗಿತ್ತು, ಮುನಿಶಾಂತ ಕ್ಷೇತ್ರವಾಗಿ ರಿಶಿಪಳ್ಳಿಯನಿಸಿಕೊಂಡಿತು ಎಂದು ಸ್ಥಳ ಪುರಾಣದ ಕಥೆ ಮುಕ್ತಾಯವಾಗಿದೆ.

ಶಾಪಾಶಯಗಳು

ದಾನ ಕೊಟ್ಟಿದ್ದು ಉಳಿಯಬೇಕು, ಬೆಳೆಯಬೇಕೆಂಬ ಆಶಯದಿಂದ ಒಬ್ಬ ರಾಜ ಹೋಗಿ ಇನ್ನೊಬ್ಬ ರಾಜ ಬಂದಾಗ ನ್ಯಾಯವಾಗಿ ಹಿಂದಿನವರ ದಾನವನ್ನು ಮನ್ನಿಸಬೇಕು, ದಾನದ ಸ್ಮರಣಕ್ಕಾಗಿ ಹಾಕಿದ ಶಾಸನವನ್ನು ಯಾರು ಕೆಡಸಬಾರದು ಅದನ್ನು ಸೂರ್ಯ–ಚಂದ್ರ ಇರುವವರೆಗೂ ಕಾಪಾಡಿಕೊಂಡು ಹೋಗಬೇಕು. ಆದ್ದರಿಂದ ಈ ಶಾಸನವನ್ನು ರಕ್ಷಿಸಿಕೊಂಡು ಹೋಗುವವರಿಗೆ ಒಳ್ಳೆಯ ಫಲಗಳು ದೊರೆಯುತ್ತವೆಂಬ ಜನಪದ ನಂಬಿಕೆಯು ಈ ಶಾಸನಗಳ ಅಧ್ಯಯನದಿಂದ ತಿಳಿಯುತ್ತದೆ.

ಜಾಯತೇ ಕ್ರಿಮಿ ॥ ವಿಂಧ್ಯಾಟವೀಶ್ವತೋಯಾಸು ವೃಕ್ಷಕೋಟರವಾಸಿನ ಕ್ರಿಷ್ಣಸರ್ಪ್ಪಾ ಪ್ರಜಾಯಂತೇ

ಜನದ್ರಬ್ಯಾಪಹಾರಕಾ ।। *ಅಸ್ವಸ್ತಿಕರಂಗಳು ದೇವಪ್ಪಗಣದ್ರವ್ಯವೆಂಬ ನಿವರ್ವಕರ್ಳಿ.*[9]

ದಾನವನ್ನು ಕೆಡಿಸಿದವನಿಗೆ, ಅಪಹರಿಸಿದವನಿಗೆ, ಒದಗುವ ಪಾಪಗಳು ಪ್ರಾಯಶ ಕೊಟ್ಟ ದಾನಗಳು ಸಾಮಾನ್ಯವಾಗಿ ಉಳಿದುಕೊಂಡು ಹೋಗಬೇಕು. ಒಬ್ಬ ರಾಜ ಹೋಗಿ ಮತ್ತೊಬ್ಬ ರಾಜಬಂದಾಗ, ಧರ್ಮ, ಜಾತಿ, ಪ್ರಾದೇಶಿಕ ವೈಶಮ್ಯದಿಂದಲು ಶಾಸನವನ್ನು ನಾಶ ಮಾಡಿರಬಹುದು ಆದ್ದರಿಂದ ಶಾಸನದಲ್ಲಿ ಶಾಪಾಶಯಗಳು ಕಾಣುತ್ತವೆ. ಶಾಸನ ವಿಷಯಾನುಕ್ರಮಣಿಕೆಯ ಕೊನೆಯ ಹಂತದಲ್ಲಿ ಬರುವ ಅರಸನ ಮುದ್ರೆ ಅಥವಾ ಸಹಿ ಶಾಸನದಲ್ಲಿ ಕಾಣುತ್ತೇವೆ. ಇಂತಹ ಶಾಸನದಲ್ಲಿ ಅರಸರ ಅಂಕಿತವು ವಿಜಯನಗರ ಅರಸರ ಕಾಲದಲ್ಲಿ ಹೆಚ್ಚು ಕಂಡುಬರುತ್ತವೆ. ರಾಜನ ಅಂಕಿತ ಮತ್ತು ಲೇಖನಿಸಿದ ಕವಿ ಹಾಗೂ ಕಂಡಕರಣೀಯ ಬಗ್ಗೆ ಈ ಶಾಸನ ತಿಳಿಸುತ್ತವೆ.

ಕ್ರಿ.ಶ. 1148 ರ ಶಾಸನದಲ್ಲಿ ಶ್ರೀಮತ್ ಭುವನಚಂದ್ರ ಸಿದ್ದಾನ್ತದೇವರ ಗುಡ್ಡಂ ಕಲಿದೇವ ಪಂಡಿತರು ಪೇಳ್ದರು ಧರೆಯ ರೂವಾರಿಚಕ್ರವರ್ತ್ತಿ ಸುಮತೋಜರ ಕಣ್ಡರಣೆ.[10] ಕ್ರಿ.ಶ. 1186ರ ಶಾಸನದಲ್ಲಿ ಶಾಸನಮನುಸಿರ್ವ ನೆವದಿಂ ಲೇಸನಿಸಿದ ರಿಶ್ಯಶೃಂಗ ಮಹಿಮೋಂನತಿಯಂ ಭಾಸುರಮತಿ ಬಂಣ್ನಿಸಿದಂ ಶ್ರೀ ಸಜ್ಜನತಿಳಕನೊಸೆದು ಪೊಸಗಂನಡದಿಂ ।। ಧರೆಯ ರೂವಾರಿ ಚಕ್ರವರ್ತ್ತಿ ಚಂಡೋಜನ ಮಂಮಂ ಸಾತೋಜನ ಕಂಡರಣೆ ಮಂಗಳ ಮಹಾ ಶ್ರೀ ಶ್ರೀ[11]

ಉಪಸಂಹಾರ

ಒಟ್ಟಾರೆಯಾಗಿ ಈ ರೀತಿ ಶಿರಸಂಗಿಯ ಶಾಸನದಲ್ಲಿ ಕಲ್ಯಾಣಿ ಚಾಲುಕ್ಯರ ಅರಸ ಎರಡನೇ

ಜಗದೇಕಮಲ್ಲ ಮತ್ತು ಆತನ ಮಹಾ ಪ್ರಧಾನ ದಂಡ ನಾಯಕ ಕೇಶಿಮಯ್ಯನ ಕುರಿತು ಹಾಗೂ ನಾಲ್ಕನೇ ಸೋಮೇಶ್ವರನ ಹಾಗೂ ಹಬ್ಬೆನಾಯಕನ ಕುರಿತು ಶಿರಸಂಗಿಯ ಶಾಸನಗಳು ರಚನೆಯಾದವು ಈ ಶಾಸನಗಳಲ್ಲಿ ಅರಸರ ವಂಶವಳಿ, ಸಿರಸಂಗಿಯ ಪ್ರಾಕೃತಿಕ ಪರಿಸರದ ವರ್ಣನೆಯನ್ನು, ಜನಪದ ಭಾಷೆ, ಅಂಗಡಿ ಮುಗ್ಗಟ್ಟುಗಳು, ಕಥೆ, ಪೌರಾಣಿಕ ಹಿನ್ನೆಲೆ, ಆರು ಜನ ಗಾವುಂಡರ ಬಗ್ಗೆ, ದಾನದತ್ತಿ ಬಗ್ಗೆ. ಕೆರೆ ನಿರ್ಮಾಣ, ಕಲ್ಯಾಣ ಕಾರ್ಯಗಳ ಬಗ್ಗೆ, ಮಳೆ–ಬೆಳೆ, ಕೃಷಿ ಕಾಯಕ ಚಟುವಟಿಕೆಗಳು, ದೇಣಿಗೆ, ಕಾಣಿಕೆ, ದಾನ, ವ್ಯಾಪಾರಿಗಳು, ಗ್ರಾಮದೇವತೆ, ಜನರಿಗೆ ವಿಧಿಸಿದ ವಿವಿಧ ತೆರಿಗೆಗಳು, ಲಾಂಛನಗಳು, ಜನಪದ ಸಾಹಿತ್ಯ, ಇತ್ಯಾದಿ ಜನಪರ ಜಗತ್ತು ಪ್ರಾಸಂಗಿಕವಾಗಿ ಚಿತ್ತಾರಗೊಳ್ಳುವ ಬಗೆಯನ್ನು ನೋಡಬಹುದು. ಒಟ್ಟಾರೆ ಈ ಬಗೆಯ ಅಧ್ಯಯನದಿಂದ ಆ ಕಾಲದ ಜಾನಪದ ಲೋಕವೊಂದು ತೆರೆದುಕೊಳ್ಳುತ್ತದೆ.

ಕೊನೆಟಿಪ್ಪಣಿಗಳು

1. KL. Vol. IP 40: NO 24 and 25 of 1939 p.40
2. ಚೆನ್ನಕ್ಕ ಪಾವಟೆ. (2008). *ಸಾಂಸ್ಕೃತಿಕ ಶೋಧ ಮತ್ತು ಪ್ರಯೋಗಶೀಲತೆ.* ಚೆನ್ನಗಂಗಾ ಪ್ರಕಾಶನ, ಪುಟ. 34
3. ಕಂಬಾರ ರಾಜು ನಾಗಪ್ಪ. (2018). *ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ.35
4. ಚೆನ್ನಕ್ಕ ಪಾವಟೆ. (2008). *ಪೂರ್ವೋಕ್ತ.* ಪುಟ. 34
5. ಗಣೇಶ, ಕೆ.ಆರ್. (2008). *ಶಾಸನ ಸಂಸ್ಕೃತಿ.* ಇತಿಹಾಸ ಸಂಶೋಧನ ಮಂಡಲ. ಪುಟ 108–109
6. KL.. voL. IP 40: NO 24 and 25 of 1939 po.40
7. ಅದೇ., ಪುಟ.42–43
8. ಅದೇ., ಪುಟ. 43
9. ಅದೇ., ಪುಟ. 51
10. ಅದೇ., ಪುಟ. 38
11. ಅದೇ., ಪುಟ 51